# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1256 |
| ಸದಸ್ಯರ ಹೆಸರು | : | ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 22.08.2025 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿಯಲ್ಲಿರುವ ತೊಗರಿ ಅಭಿವೃದ್ಧಿ ಮಂಡಳಿ ಬಿಳಿಯಾನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ; | ಇಲ್ಲ. ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯಲ್ಲಿ ಬೆಂಬಲ ಬೆಲೆ ಯೋಜನೆಯಡಿ ದ್ವಿದಳಧಾನ್ಯಗಳನ್ನು ರೈತರಿಂದ ಖರೀದಿಸಲಾಗುತ್ತಿದ್ದು 2024-25ನೇ ಸಾಲಿನಲ್ಲಿ 13,597 ರೈತರಿಂದ 2,05,803 ಕ್ವಿಂಟಾಲ್ ತೊಗರಿಯನ್ನು ಖರೀದಿಸಲಾಗಿದೆ. |
| ಆ) | ಈ ತೊಗರಿ ಅಭಿವೃದ್ಧಿ ಮಂಡಳಿ ಯಾವಾಗ ಪ್ರಾರಂಭವಾಗಿದೆ; ಹಾಗೂ ಇಲ್ಲಿಯವರೆಗೆ ಅದಕ್ಕೆ ನೀಡಿರುವ ಅನುದಾನವೆಷ್ಟು; | ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿ., ಕಲಬುರಗಿ ಸಂಸ್ಥೆಯು, 1956ರ ಕಂಪನಿ ಕಾಯ್ದೆಯಡಿ, ದಿನಾಂಕ:15-03-2002ರಂದು ಅಸ್ತಿತ್ವಕ್ಕೆ ಬಂದಿರುತ್ತದೆ. 2018 ರಿಂದ 'ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿ. ಕಲಬುರಗಿ' (KARNATAKA STATE PULSES ABHIVRIDHI MANDALI LIMITED) ಎಂದು ಬದಲಾಯಿಸಿ ಮರು ನಾಮಕರಣ ಮಾಡಲಾಗಿರುತ್ತದೆ.<br><br>ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಮಂಡಳಿಗೆ ಈ ಕೆಳಗಿನಂತೆ ಅನುದಾನ ಒದಗಿಸಲಾಗಿರುತ್ತದೆ.<br><br>1. ಕರ್ನಾಟಕ ಸರ್ಕಾರವು 2002ರಲ್ಲಿ ರೂ.500.00 ಲಕ್ಷ ಹಣವನ್ನು ಷೇರು ಹಣವಾಗಿ ಬಿಡುಗಡೆ ಮಾಡಲಾಗಿರುತ್ತದೆ.<br>2. 2021-22ನೇ ಸಾಲಿನಿಂದ ಪ್ರತಿ ಸಾಲಿಗೆ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ.50.00 ಲಕ್ಷ ಹಣ ಒದಗಿಸಲಾಗುತ್ತಿದೆ.<br>3. ಭೀಮಾ ಪಲ್ಸಸ್ ಬ್ರಾಂಡ್‌ನಡಿ ಮಾರಾಟ ಮಾಡುವ ಯೋಜನೆಯ ಅನುಷ್ಠಾನಕ್ಕಾಗಿ |

| | | |
|---|---|---|
| | | 2022-23ನೇ ಸಾಲಿನಲ್ಲಿ ರೂ.200.00 ಲಕ್ಷ ಆವರ್ತ ನಿಧಿ ಬಿಡುಗಡೆ ಮಾಡಲಾಗಿರುತ್ತದೆ.<br>4. 2022-23ನೇ ಸಾಲಿನಲ್ಲಿ ಭೌಗೋಳಿಕ ಸೂಚ್ಯಂಕ ತೊಗರಿ ಮತ್ತು ಇತರೆ ದ್ವಿದಳ ಧಾನ್ಯಗಳ ಬ್ರ್ಯಾಂಡಿಂಗ್ ಮತ್ತು ಮಾರ್ಕೆಟಿಂಗ್‌ಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯಧನ ರೂ.184.30 ಲಕ್ಷ ನೀಡಲಾಗಿದೆ.<br>5. APEDA ಸಂಸ್ಥೆ ಹಾಗೂ ರಾಜ್ಯ ಸರ್ಕಾರದ ಸಹಾಯಾನುದಾನದಲ್ಲಿ ದ್ವಿದಳ ಧಾನ್ಯಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗಾಗಿ ಘಟಕ ಸ್ಥಾಪಿಸಲು ರೂ.341.40 ಲಕ್ಷ ಅನುದಾನ ಒದಗಿಸಲಾಗಿರುತ್ತದೆ. |
| ಇ) | ಈ ಮಂಡಳಿಯನ್ನು ಪುನಶ್ಚೇತನ ಮಾಡಲು ಸರ್ಕಾರದ ಮುಂದೆ ಯೋಜನೆ ಏನಾದರೂ ಇದೆಯಾ; | ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಗೆ, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಬೆಳೆಯುವ ಭೌಗೋಳಿಕ ಸೂಚ್ಯಂಕ ಹೊಂದಿದ ತೊಗರಿ ಬೇಳೆಯನ್ನು GI ಅಡಿಯಲ್ಲಿ ಖರೀದಿಸಿ, "ಭೀಮಾ ಪಲ್ಸಸ್" ಬ್ರ್ಯಾಂಡ್‌ನಡಿ ಮಾರಾಟ ಮಾಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>ದ್ವಿದಳ ಧಾನ್ಯಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗಾಗಿ ಘಟಕ ನಿರ್ಮಿಸಲಾಗುತ್ತಿದೆ.<br>ದ್ವಿದಳ ಧಾನ್ಯಗಳ ಸಂಗ್ರಹಣೆಗಾಗಿ 100 ಮೆಟ್ರಿಕ್ ಟನ್ ಸಾಮರ್ಥ್ಯದ 2 ಗೋದಾಮುಗಳನ್ನು ನಿರ್ಮಿಸಲಾಗುತ್ತಿದೆ. |
| ಈ) | ಯೋಜನೆ ಇದ್ದರೆ ಅದಕ್ಕೆ ಅನುದಾನ ನೀಡಲು ಸರ್ಕಾರ ತೆಗೆದುಕೊಂಡ ಕ್ರಮವೇನು? | 1. ಭೀಮಾ ಪಲ್ಸಸ್ ಬ್ರ್ಯಾಂಡ್‌ನಡಿ ಮಾರಾಟ ಮಾಡುವ ಯೋಜನೆಯ ಅನುಷ್ಠಾನಕ್ಕಾಗಿ 2022-23ನೇ ಸಾಲಿನಲ್ಲಿ ರೂ.200.00 ಲಕ್ಷ ಆವರ್ತ ನಿಧಿ ಬಿಡುಗಡೆ ಮಾಡಲಾಗಿರುತ್ತದೆ.<br>2. 2022-23ನೇ ಸಾಲಿನಲ್ಲಿ ಭೌಗೋಳಿಕ ಸೂಚ್ಯಂಕ ತೊಗರಿ ಮತ್ತು ಇತರೆ ದ್ವಿದಳ ಧಾನ್ಯಗಳ ಬ್ರ್ಯಾಂಡಿಂಗ್ ಮತ್ತು ಮಾರ್ಕೆಟಿಂಗ್‌ಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯಧನ ರೂ.184.30 ಲಕ್ಷ ನೀಡಲಾಗಿದೆ.<br>3. APEDA ಸಂಸ್ಥೆ ಹಾಗೂ ರಾಜ್ಯ ಸರ್ಕಾರದ ಸಹಾಯಾನುಧಾನದಲ್ಲಿ ದ್ವಿದಳ ಧಾನ್ಯಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗಾಗಿ |

| | | |
|---|---|---|
| | | ಘಟಕ ಸ್ಥಾಪಿಸಲು ರೂ.341.40 ಲಕ್ಷ ಅನುದಾನ ಒದಗಿಸಲಾಗಿರುತ್ತದೆ.<br>4. ದ್ವಿದಳ ಧಾನ್ಯಗಳ ಸಂಗ್ರಹಣೆಗಾಗಿ 100 ಮೆಟ್ರಿಕ್ ಟನ್ ಸಾಮರ್ಥ್ಯದ 2 ಗೋದಾಮುಗಳನ್ನು ನಿರ್ಮಿಸಲು ರೂ.350.00 ಲಕ್ಷ ಅನುದಾನ ಒದಗಿಸಲಾಗಿದೆ. |

*ಕೃಇ 143 ಎಎಂಎಸ್ 2025*

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು